ದಿನಾಂಕ: 01.10.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಕೆ ವಿ ಡಿ ವಕೀಲರಿಂದಃ**

ನನ್ನ ತಂದೆ ಮತ್ತು ದೊಡ್ಡಪ್ಪನ ಮದ್ಯೆ ಯಾವುದೇ ಭಾಗ ಆಗಿಲ್ಲ ಎಂದರೆ ಸರಿಯಲ್ಲ. ಭಾಗವಾದ ನಂತರ ಜಮೀನು ಇಷ್ಟೇ ಬರುತ್ತದೆ ಎಂದು ವಾದಿಗೆ ಹೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ವಾದಿಯು ಜಮೀನು ಬೇಡ ಬ್ಯಾಂಕಿನ ಸಾಲ ಪಾವತಿಸಿ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ನಿಮ್ಮ ತಾತನ ಹೆಸರಿನಿಂದ ನಿಮ್ಮ ತಂದೆ ಹೆಸರಿಗೆ ಹೇಗೆ ಆಸ್ತಿ ಬಂದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಬ್ಯಾಂಕಿನ ಸಾಲಕ್ಕೆ ಆಸ್ತಿ ಹರಾಜು ಬಂದಾಗ ನನ್ನ ದೊಡ್ಡಪ್ಪ ಸ್ಟಾಂಪ್ ಪೇಪರ್ ಮೇಲೆ ಬರೆದುಕೊಟ್ಟ ಆಧಾರದ ಮೇಲೆ ನನ್ನ ತಂದೆಗೆ ಆಗಿದೆ ಎಂದು ನುಡಿಯುತ್ತಾರೆ. ಆ ಪತ್ರವನ್ನು ತಂದು ಹಾಜರು ಪಡಿಸಿಲು ಏನು ತೊಂದರೆ ಇಲ್ಲ ಸಾಕ್ಷಿ ಮುಂದುವರೆದು ಅದು ಸಿವಿಲ್ ನ್ಯಾಯಾಲಯದಲ್ಲಿ ಇದೆ ಎಂದು ಹೇಳುತ್ತಾರೆ. ಸಿವಿಲ್ ನ್ಯಾಯಾಲಯದಲ್ಲಿರುವ ದಾಖಲೆಯನ್ನು ಈ ನ್ಯಾಯಾಲಯಕ್ಕೆ ತಂದು ಹಾಜರು ಪಡಿಸಲು ತೊಂದರೆ ಇಲ್ಲ. ನನ್ನ ತಂದೆ ರೆವಿನ್ಯೂ ಅಧಿಕಾರಿಗಳೊಂದಿಗೆ ಸೇರಿಕೊಂಡು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಗೆ ಅರ್ಧ ಭಾಗ ಹಿಸ್ಸೆ ಇದೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿರುತ್ತದೆ ದಿಃ15.01.1978 ರ ವಿಭಾಗದ ಮೂಲಕ ನಮ್ಮ ತಂದೆಯವರಿಗೆ ಪಹಣಿಯಾಗಿದೆ ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ಆರ್ ಆರ್ ಟಿ ಸಿ ಆರ್ 17/1995-96 ರ ಪ್ರತಿಯನ್ನು ಹಾಜರು ಪಡಿಸಿರುವುದಿಲ್ಲ. ತಹಶೀಲ್ದಾರರು ಆರ್ ಆರ್ ಟಿ ಸಿ ಆರ್ ಆದೇಶದಂತೆ ಖಾತೆ ಮುಂದುವರೆದು ಹೋಗಬೇಕೆಂದು ಆದೇಶ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮಿಪತಿಯವರು ಮತ್ತು ಅವರ ಮಗ ನರಸಿಂಹಮೂರ್ತಿ ವೆಂಕಟಾಚಲ ಶೆಟ್ಟಿಯವರಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದು ನಾನು ಹೇಳಿರುವುದಿಲ್ಲ .

ದಿಃ15.10.2018 ರಂದು ಲಕ್ಷ್ಮಿಪತಿಯಪ್ಪ ಮತ್ತು ಸಹೋದರರು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ವಾದಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಗೆ ½ ಭಾಗ ಹಕ್ಕು ಇದೆ ಎಂದರೆ ಸರಿಯಲ್ಲ.

ಓಎಸ್ 33/2012 ರ ದಾವೆಯ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಆ ದಾವೆಯಲ್ಲಿ ವಾದಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಡಿಕ್ರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

**2 ನೇ ಪ್ರತಿವಾದಿಪರ ವಕೀಲರಿಂದ ಪಾಟೀ ಸವಲು**

ದಿಃ15.10.1998 ರಂದು ನನ್ನ ಸಹೋದರ ಮತ್ತು ನನ್ನ ತಂದೆ ಸರ್ವೆ ನಂ.16/3 ರಲ್ಲಿ 3 ಎಕರೆ 16 ಗುಂಟೆ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ನಂತರ 2 ನೇ ಪ್ರತಿವಾದಿ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ ನಂತರ ನನ್ನ ಅಕ್ಕ ತಂದೆ ಮತ್ತು 2 ನೇ ಪ್ರತಿವಾದಿ ವಿರುದ್ಧ ದಾವೆ ಸಲ್ಲಿಸಿದ್ದು ಅದು ವಜಾ ಆಯಿತು ಎಂದರೆ ಸರಿ. ಆ ದಾವೆ ನಂಬರ್ 33/2012 ಎಂದರೆ ನಿಜ. ಮಾರಾಟ ಮಾಡಿದ್ದರಿಂದ 2 ನೇ ಪ್ರತಿವಾದಿ ಸ್ವಾದೀನದಲ್ಲಿ ಇದ್ದರೂ ಸಹ ತೊಂದರೆ ಕೊಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು